ಒ.ಎಸ್.ನಂ:87/2018
ಡಿ.ಡಬ್ಲ್ಯೂ.2

**ದಿ:04.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲು:-**ವಾದಿ ಪರ ಶ್ರೀ. **B.S.,** ವಕೀಲರಿಂದ:-

ನನಗೆ ವಾದಿ ಮತ್ತು ಪ್ರತಿವಾದಿಗಳು ನನಗೆ ಮನೆ ಪಕ್ಕ ಇದ್ದ ಕಾರಣ ಪರಿಚಯ ಇರುತ್ತಾರೆ . ನನಗೆ ಒದಲು ಬರೆಯಲು ಬರುತ್ತದೆ . ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನನ್ನ ಮನೆಯ ಪೂರ್ವ ದಿಕ್ಕಿಗೆ ವಾದಿಯ ಮನೆ ಇರುತ್ತದೆ . ವಾದಿಯ ತಂದೆ ಹೆಸರು ನನಗೆ ಗೊತ್ತಿರುತ್ತದೆ . ವಾದಿಯ ತಂದೆ ಕಾಲದಿಂದಲೂ ನಮ್ಮ ಮನೆ ಪಕ್ಕದಲ್ಲಿ ವಾಸವಿರುತ್ತಾರೆ ಎಂದರೆ ಸರಿ. ನನಗೆ ದಾವಾ ಆಸ್ತಿಯನು ಯಾವ ದಿನಾಂಕ ಯಾವ ತಾರೀಖಿನಂದು ಹಾಜರು ಮಾಡಿರುತ್ತಾರೆ ಗೋತ್ತಿಲ್ಲ . ಎಷ್ಟು ಮೊತ್ತಕ್ಕೆ ಹರಾಜು ಆದ ಬಗ್ಗೆ ಗೋತ್ತಿಲ್ಲ . ನನಗೆ ಸದರಿ ಹರಾಜಿನಲ್ಲಿ ಯಾರ್ಯಾರು ಭಾಗಿ ಆಗಿರುವ ಬಗ್ಗೆ ಗೋತ್ತಿಲ್ಲ . ಸಾಕ್ಷಿ ಮುಂದುವರೆಸಿ ಜುಗುಲು ಹನುಮಂತಪ್ಪ ಅವರ ಹೆಸರಿಗೆ ಹರಾಜಿನ ಖರೀದಿದಾರು ಇರುತ್ತಾರೆ ಎಂದು ಹೇಳುತ್ತಾರೆ . ಸದರಿ ಹರಾಜಿಗೆ ಸಂಬಂದವಾಗಿ ನಾನು ಯಾವುದೇ ದಾಖಲೆ ನೋಡಿರುವುದಿಲ್ಲ . ಜುಗೂಲು ಹನುಮಂತಪ್ಪ ರವರ ಬಳಿ ಯಾವ ದಾಖಲೆ ಇರುವ ಬಗ್ಗೆ ನನಗೆ ಗೋತ್ತಿಲ್ಲ. ವಾದಿಯು ಯಾವ ವಿಚಾರವಾಗಿ ದಾವೆ ಸಲ್ಲಿಸಿರುವ ಬಗ್ಗೆ ನನಗೆ ಗೋತ್ತಿಲ್ಲ . ದಾವಾ ಆಸ್ತಿ ಖಾತಾ ನಂಬರ್ ನನಗೆ ಗೋತ್ತಿಲ್ಲ. ವಾದಿ ರಾಮಣ್ಣ ಮತ್ತು ನಮ್ಮ ಮನೆಯು ಒಂದಕ್ಕೊಂದು ಅಂಟಿಕೊಂಡಿರುತ್ತಾವೆ ಎಂದರೆ ಸರಿ. ಮೊದಲಿಗೆ ವಾದಿಯವರು ಮನೆ ಕಟ್ಟಿಕೊಂಡಿರುತ್ತಾರೆ ನಂತರ ನಾನು ಮನೆ ಕಟ್ಟಿರುತ್ತೇನೆ ಎಂದರೆ ಸರಿ. ಸನ್ 2002 ರಲ್ಲಿ ನಮ್ಮ ಮತ್ತು ವಾದಿಯ ಮನೆ ವಿಚಾರವಾಗಿ ಗಲಾಟೆ ಆಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಊರಿನ ಗುರಪ್ಪ ಎಂಬುವವರು ನನಗೆ ಪರಿಚಯ ಇರುತ್ತಾರೆ . ಪ್ರತಿವಾದಿರವರು ನಮ್ಮ ಸಂಬಂಧಿಕರು ಎಂದರೆ ಸರಿ. ವಾದಿಯ ದಾವಾ ಆಸ್ತಿಯಲ್ಲಿ ಸುಮಾರು ಸನ್ 2002 ರಿಂದ ತಮ್ಮ ದನ ಕರುಗಳನ್ನು ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ . ಸನ್ 2002 ರಲ್ಲಿ ನನಗೂ ಮತ್ತು ವಾದಿಯವರಿಗೆ ಜಗಳವಾದಾಗ ಗುರಪ್ಪ ಅವರ ಕಡೆಯಿಂದ ನಾನು ಇದೇ ನ್ಯಾಯಾಲಯದಲ್ಲಿ ಒಂದು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮೂಲಕವೇ ಸದರಿ

ದಾವೆಯನ್ನು ಗುರಪ್ಪ ಅವರು ವಾದಿಯ ವಿರುದ್ದ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ವಾದಿಯವರು ಸುಮಾರು 45 ವರ್ಷದಿಂದ ನಮ್ಮ ಮನೆಯ ಪಕ್ಕದಲ್ಲೇ ವಾಸವಿರುತ್ತಾರೆ ಎಂದರೆ ಸರಿ. ನನ್ನ ಮುಖ್ಯವಿಚಾರಣೆ ಪ್ರಮಾಣದ ಮಾಹಿತಿ ನನಗೆ ಗೋತ್ತಿಲ್ಲ . ನನಗೆ ನ್ಯಾಯಾಲಯದಲ್ಲಿ ಸಾಕ್ಷಿ ನೀಡಲು ಯಾವುದೇ ಸಮನ್ಸ್ ಜಾರಿ ಆಗಿರುವುದಿಲ್ಲ . ನಾನು ದಾವಾ ಆಸ್ತಿ ಸಂಬಂದವಾಗಿ ಖಾತೆ , ಕಂದಾಯ ರಶೀದಿಗಳು ನೋಡಿರುವುದಿಲ್ಲ . ಜಗಲು ಹನುಮಂತಪ್ಪ ಅವರ ದಾವಾ ಆಸ್ತಿ ಹರಾಜು ಪಡೆದುಕೊಂಡ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ . ನನಗೆ ಈ ದಿನ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಲು ಪ್ರತಿವಾದಿ ಕರೆದುಕೊಂಡು ಬಂದಿರುತ್ತಾರೆ . ಪ್ರತಿವಾದಿ ಹೇಳಿಕೊಟ್ಟ ಹಾಗೆ ನಾನು ಸಾಕ್ಷಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿ ನನ್ನ ಸಂಬಂದಿ ಆದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಮಾಹಿತಿ ಎಲ್ಲಾ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ:</u> ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು